1.	ಸಂಬಂಧಿಸಿದ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	ಅಧ್ಯಕ್ಷರು
2.	ಗ್ರಾಮಪಂಚಾಯ್ತಿಗೆ ಸಂಬಂಧಿಸಿದ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು	ಸದಸ್ಯರು
3.	ಸಂಬಂಧಿಸಿದ ಗ್ರಾಮಪಂಚಾಯ್ತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು	ಸದಸ್ಯರು
4.	ಸಂಬಂಧಿಸಿದ ಗ್ರಾಮಪಂಚಾಯ್ತಿಯ ಕಾರ್ಯದರ್ಶಿ	ಸದಸ್ಯರು
5.	ಸಂಬಂಧಿಸಿದ ತಾ.ಪಂಚಾಯ್ತಿಯ ಕಾರ್ಯನಿರ್ವಾಹಕ ಅಧಿಕಾರಿಗಳು	ಸದಸ್ಯರು ಕಾರ್ಯದರ್ಶಿ

ಸಮಿತಿಯ ಶಿಫಾರಸ್ಸನ್ನು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಯು ಗ್ರಾಮಪಂಚಾಯ್ತಿಗೆ ತಿಳಿಸುವರು. ಗ್ರಾಮ ಪಂಚಾಯ್ತಿಯು ತಾನು ವಿಧಿಸುವ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಿರ್ಣಯದ ಮೂಲಕ ನಿರ್ಧರಿಸುತ್ತದೆ.

ಆ) ಗ್ರಾಮ ಪಂಚಾಯತಿಗಳು ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಕರ ವಸೂಲಿ ಮಾಡುತ್ತಾರೆ.

ಇ) ನಾಗರೀಕ ಸಮಾಜದಲ್ಲಿ ತೆರಿಗೆ ಅನಿವಾರ್ಯ.

ಈ) ಈಗಾಗಲೇ ಮಾರ್ಗಸೂಚಿ ಹೊರಡಿಸಲಾಗಿದೆ. ಸುತ್ತೋಲೆ ಸಂಖ್ಯೆ: ಗ್ರಾಅಪ 380 ಗ್ರಾಪಂಅ 2002, ದಿನಾಂಕ: 24-5-2003.

4811 (5648) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್): ಮಾನ್ಯ, ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯ, ನಂದಿಕೂರು ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ನಾಗಾರ್ಜುನ ಉಷ್ಣವಿದ್ಯುತ್ ಸ್ಥಾವರ ಯೋಜನೆಯ ವಿವರಗಳೇನು;

ಆ) ಈ ಯೋಜನೆಯ ಮೂಲಕ ಉತ್ಪಾದಿಸಲಾಗುವ ವಿದ್ಯುತ್‌ನ ಪ್ರಮಾಣ ಎಷ್ಟು ಹಾಗೂ ಸ್ಥಾವರಕ್ಕಾಗಿ ಬಂಡವಾಳ ಹೂಡಿಕೆಯ ಮೊತ್ತ ಎಷ್ಟು;

ಇ) ಈ ಸ್ಥಾವರಕ್ಕಾಗಿ ಸರ್ಕಾರ ಸ್ವಾಧೀನಪಡಿಸಿಕೊಡುವ ಜಮೀನಿನ ವಿಸ್ತೀರ್ಣ ಎಷ್ಟು;

ಈ) ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯ ವಿವರಗಳೇನು;

ಉ) ಜಮೀನು ಕಳೆದುಕೊಳ್ಳುವವರಿಗೆ ಸರ್ಕಾರ ಕೊಡಲಿರುವ ಪರಿಹಾರ ಮೌಲ್ಯದ ವಿವರಗಳೇನು;

ಊ) ಈ ಸ್ಥಾವರಕ್ಕಾಗಿ ಜಮೀನನ್ನು ಯಾವ ಯಾವ ಪ್ರದೇಶಗಳಿಂದ ವಶಪಡಿಸುಕೊಳ್ಳಲು ಉದ್ದೇಶಿಸಲಾಗಿದೆ. (ಜಮೀನಿನ ಸರ್ವೆ ನಂವರ್ ಮತ್ತು ವಿಸ್ತೀರ್ಣವನ್ನು ಒದಗಿಸುವುದು);

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಇದು ಒಂದು ಕಲ್ಲಿದ್ದಲು ಆಧಾರಿತ ಉಷ್ಣವಿದ್ಯುತ್ ಸ್ಥಾವರ. ಇದನ್ನು ನಾಗಾರ್ಜುನ ಪವರ್ ಕಂಪನಿಯವರು ಅನುಷ್ಠಾನ ಗೊಳಿಸುತ್ತಿರುವರು. ಈ ಯೋಜನೆ ಅನುಷ್ಠಾನಕ್ಕೆ ಬೇಕಾಗುವ ಪೂರ್ವಭಾವಿ ಅನುಮತಿಗಳನ್ನು ಕಂಪನಿಯು ಪಡೆದುಕೊಂಡಿದೆ. ಯೋಜನೆಯ ಸ್ಥಾಪಿತ ಸಾಮರ್ಥ್ಯ 1015 ಮೆಗಾ ವ್ಯಾಟ್‌ಗಳಾಗಿದ್ದು 507.5 ಮೆಗಾವ್ಯಾಟ್‌ನ ಎರಡು ಘಟಕಗಳನ್ನು ಒಳಗೊಂಡಿರುತ್ತದೆ.

ಆ) 1015 ಮೆಗಾವ್ಯಾಟ್ ಸಾಮರ್ಥ್ಯ ಈ ಯೋಜನೆಯಿಂದ ವರ್ಷಕ್ಕೆ ಸುಮಾರು 6400 ದಶಲಕ್ಷ ಯುನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ. ಈ ಯೋಜನೆಯ ಅಂದಾಜು ವೆಚ್ಚವು ಸುಮಾರು 4300 ಕೋಟಿರೂಪಾಯಿಗಳಾಗಿರುತ್ತದೆ. ಅಂದಾಜು ವೆಚ್ಚದ ಶೇಕಡ 30ನ್ನು ಕಂಪನಿಯು ಬಂಡವಾಳವಾಗಿ ಹೂಡಲಿದ್ದು ಉಳಿದ ಶೇಕಡ 70ನ್ನು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲವಾಗಿ ಪಡೆಯಲಿದೆ.

ಇ) ಸುಮಾರು 582 ಎಕರೆ 97 ಸೆಂಟ್ಸ್.

ಈ) ಕೆಐಎಡಿ ಕಾಯಿದೆ ಅಡಿಯಲ್ಲಿ ಎಲ್ಲಾ ವಿಧಿ ವಿಧಾನಗಳನ್ನು ಪೂರ್ಣಗೊಳಿಸಿ ಒಟ್ಟು 582 ಎಕರೆ 97 ಸೆಂಟ್ಸ್ ಜಮೀನನ್ನು ಭೂಸ್ವಾಧೀನಪಡಿಸಲಾಗಿದೆ. ಪ್ರಾರಂಭಿಕವಾಗಿ ಕೆಐಎಡಿ ಕಾಯಿದೆ 1966ರ ಅಡಿಯಲ್ಲಿ ಕಲಂ 1(3), 3(1) ಹಾಗೂ 28(1)ರ ಅಧಿಸೂಚನೆಯನ್ನು ಒಟ್ಟು 1276 ಎಕರೆ 51 ಸೆಂಟ್ಸ್ ಜಮೀನಿಗೆ ದಿನಾಂಕ 28.5.1998ರಲ್ಲಿ ಹೊರಡಿಸಲಾಗಿದೆ. ವಿಶೇಷ ಭೂ ಸ್ವಾಧೀನಾಧಿಕಾರಿಗಳು ಕಲಂ 28(2) ರಡಿಯಲ್ಲಿ ಸಂಬಂಧಪಟ್ಟ ಎಲ್ಲಾ ಭೂಮಾಲೀಕರುಗಳಿಗೆ ನೋಟೀಸ್ ನೀಡಿ,

ಭೂಮಾಲೀಕರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಕಲಂ 28(3)ರ ವಿಚಾರಣಾ ಆದೇಶವನ್ನು ಮಾಡಿರುತ್ತಾರೆ. ಅಂತಿಮವಾಗಿ ಒಟ್ಟು 582 ಎಕರೆ 97 ಸೆಂಟ್ಸ್ ಜಮೀನಿಗೆ ಕಲಂ 28(4)ರಡಿಯಲ್ಲಿ ಅಂತಿಮ ಅಧಿಸೂಚನೆಯನ್ನು ದಿನಾಂಕ 03–11–1999 ರಂದು ಕಲಂ 29(2)ರಂತೆ ಉಡುಪಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಭೂ ದರ ಸಲಹಾ ಸಮಿತಿ ಸಭೆಯಲ್ಲಿ ತರಿ:ಬಾಗಾಯ್ತು ಜಮೀನಿಗೆ ಪ್ರತಿ ಎಕರೆಗೆ ರೂ.3.00 ಲಕ್ಷದಂತೆ ಹಾಗೂ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ. 2.65 ಲಕ್ಷದಂತೆ ಭೂ ಬೆಲೆ ನಿಗದಿಪಡಿಸಲಾಗಿದೆ. ಭೂ ದರ ಸಲಹಾ ಸಮಿತಿಯು ನಿಗದಿಪಡಿಸಿದ ಬೆಲೆಯನ್ನು ದಿನಾಂಕ 05–1–2000ರಂದು ನಡೆದ ಮಂಡಳಿ ಸಭೆಯಲ್ಲಿ ಅನುಮೋದಿಸಿದ್ದು. ಅದರಂತೆ ಭೂಮಾಲೀಕರಿಗೆ ಪರಿಹಾರ ಪಾವತಿಸಲಾಗುತ್ತಿದೆ. ಭೂಸ್ವಾಧೀನಪಡಿಸಿರುವ ಬಾಗಾಯತ್ ಮತ್ತು ತರಿ ಜಮೀನಿಗೆ ಪ್ರತಿ ಎಕರೆಗೆ ರೂ.3.00 ಲಕ್ಷದಂತೆ ಹಾಗೂ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.2.65 ಲಕ್ಷದಂತೆ ಒಪ್ಪಂದದ ದರದಲ್ಲಿ ಮಂಡಳಿಯಿಂದ ಪರಿಹಾರ ಪಾವತಿಸಲಾಗುತ್ತಿದೆ.

ಊ) ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕಿನ, ಎಲ್ಲೂರು, ತೆಂಕಾ, ಪಡಬೆಟ್ಟು, ಬೆಳಪು ಮತ್ತು ಸಂತೂರು ಗ್ರಾಮಗಳಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಅನುಬಂಧ "ಆ" ದಲ್ಲಿ ವಿವರಗಳನ್ನು ನೀಡಲಾಗಿದೆ.

4812(5649) ಶ್ರೀ ಕೃಷ್ಣಪಾಲೇಮಾರ್ ಜೆ.(ಸುರತ್ಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಡಜನರು ಪರಿವರ್ತನೆಯಾಗದ ಕೃಷಿ ಭೂಮಿಯಲ್ಲಿ ಮತ್ತು ಅನಧಿಕೃತ ಬಡಾವಣೆಗಳಲ್ಲಿ ಮೂಲತಃ ಮನೆಗಳನ್ನು ಹೊಂದಿರುವುದು ಹಾಗೂ ಅಲ್ಲಿಯೇ ವಾಸ ಮಾಡಿಕೊಂಡು ಬಂದಿರುವುದು ವಾಸ್ತವಾಂಶಗಳಿಂದ ಕೂಡಿರುವಾಗ ಸರ್ಕಾರ ನೋಂದಣಿ ವಿಚಾರದಲ್ಲಿ ವಿಧಿಸಿರುವ ನಿರ್ಬಂಧಗಳು ಬಹಳಷ್ಟು ಸಮಸ್ಯೆಗಳನ್ನು ತಂದಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಗಮನಿಸಿದ್ದಲ್ಲಿ, ಈ ಕುರಿತಾದ ಸರ್ಕಾರದ ಪರಿಹಾರಗಳೇನು?

ಇ) ಪರಿವರ್ತನೆಯಾಗದ ಕೃಷಿ ಭೂಮಿಯ ಮಾರಾಟ ಹಾಗೂ ನೋಂದಣಿ ಸಂಬಂಧಿಸಿದ ಕೆಲವು ನಿರ್ಬಂಧಗಳನ್ನು ಸಡಿಲಿಸಲು ಸರ್ಕಾರ ಕ್ರಮ ಜರುಗಿಸಲಾಗಿದೆಯೇ?